ಕರ್ನಾಟಕ ಸರ್ಕಾರ

# ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ಇವರ ನಡವಳಿಗಳು

**ವಿಷಯ:** ಅಲ್ಪಸಂಖ್ಯಾತರ ನವೋದಯ ಮಾದರಿ ವಸತಿ ಶಾಲೆ & ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳು, ಅಗತ್ಯ ಪೀಠೋಪಕರಣಗಳು ಹಾಗೂ ಪ್ರಯೋಗಾಲಯಗಳಿಗೆ ಅಗತ್ಯ ಸಾಮಗ್ರಿಗಳನ್ನು ಖರೀದಿಸಲು ಅನುದಾನ ಬಿಡುಗಡೆ ಮಾಡುವ ಕುರಿತು.

**ಉಲ್ಲೇಖ:**
1) ಸರ್ಕಾರಿ ಆದೇಶ ಸಂಖ್ಯೆ: ಎಂಡಬ್ಲೂಡಿ 159 ಎಂಡಿಎಸ್ 2021 ದಿ:12.04.2021.
2) ಸರ್ಕಾರಿ ಆದೇಶ ಸಂಖ್ಯೆ: ಎಂಡಬ್ಲೂಡಿ 159 ಎಂಡಿಎಸ್ 2021 ದಿ:01.07.2021.
3) ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಮಂಡ್ಯ ಜಿಲ್ಲೆರವರ ಪತ್ರ ಸಂಖ್ಯೆ:ಅ.ಸಂ.ಕ.ಇ(1)/ಇತರೆ/ಸಿಆರ್-02/2021-22 ದಿನಾಂಕ:27.08.2021
4) ಪ್ರಾಂಶುಪಾಲರು, ಮೊರಾರ್ಜಿ ದೇಸಾಯಿ ಪ. ಪೂ ವಸತಿ ಕಾಲೇಜು, ಶಿರಾ, ತುಮಕೂರು ಜಿಲ್ಲೆರವರ ಪತ್ರ ಸಂಖ್ಯೆ:ಸಅಮೊದೇವಕಾ/ಮೂ.ಸೌ/ಸಿಆರ್-01/2021-22 ದಿನಾಂಕ: 17.08.2021.

>>>$<<<

ಪ್ರಸ್ತಾವನೆ:-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಸರ್ಕಾರಿ ಆದೇಶದಲ್ಲಿ 2020-21 ನೇ ಸಾಲಿನಲ್ಲಿ ಚಾಲ್ತಿಯಲ್ಲಿರುವ ಯೋಜನೆಗಳನ್ನು 2021-22 ನೇ ಸಾಲಿನವರೆಗೆ ಮುಂದುವರೆಸಲು ಆದೇಶಿಸಿದೆ. ಉಲ್ಲೇಖ(2)ರ ಸರ್ಕಾರಿ ಆದೇಶದಲ್ಲಿ ಅಲ್ಪಸಂಖ್ಯಾತರ ವಸತಿ ಶಾಲೆಗಳ ನಿರ್ವಹಣೆಗೆ ಎರಡನೇ ತ್ರೈಮಾಸಿಕ ಕಂತಿನ ಅನುದಾನ ಬಿಡುಗಡೆ ಮಾಡಲಾಗಿದೆ.

ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಲ್ಪಸಂಖ್ಯಾತರ ಮಾದರಿ ವಸತಿ ಶಾಲೆ(ನವೋದಯ), ಕೆ.ಆರ್‌ಪೇಟೆ, ಮಂಡ್ಯ ಜಿಲ್ಲೆ, ಈ ವಸತಿ ಶಾಲೆಯಲ್ಲಿ 2021-22ನೇ ಸಾಲಿನಿಂದ ಪ್ರಥಮ/ದ್ವಿತೀಯ ಪಿಯುಸಿ ತರಗತಿಗಳು ಪ್ರಾರಂಭವಾಗಿದ್ದು, ಸದರಿ ತರಗತಿಗಳಿಗೆ ಅಗತ್ಯವಿರುವ ಪ್ರಯೋಗಾಲಯಗಳಿಗೆ ಸಾಮಾಗ್ರಿಗಳನ್ನು ಖರೀದಿಸಲು ಅನುದಾನವನ್ನು ಬಿಡುಗಡೆ ಮಾಡುವಂತೆ ಮಂಡ್ಯ ಜಿಲ್ಲೆಯ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆರವರು ಉಲ್ಲೇಖ(3)ರಲ್ಲಿ ಕೋರಿರುತ್ತಾರೆ.

ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜು, ಭುವನಹಳ್ಳಿ, ತುಮಕೂರು ಜಿಲ್ಲೆ, ಈ ವಸತಿ ಕಾಲೇಜನ್ನು 2021-22ನೇ ಸಾಲಿನಲ್ಲಿ ಇಲಾಖಾ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದ್ದು, ಸದರಿ ಕಟ್ಟಡಕ್ಕೆ ಅಗತ್ಯವಿರುವ ಮೂಲಭೂತ ಸೌಕರ್ಯಗಳಾದ ಪಾತ್ರೆ-ಪಳಗ, ತಟ್ಟೆ-ಲೋಟ, ಗ್ಯಾಸ್ ಸ್ಟೌವ್, ಗ್ಯಾಸ್ ಪೈಪ್‌ಲೈನ್ ಸಂಪರ್ಕ, ಚಪಾತಿ-ದೋಸೆ ಅಂಚು & ಕಛೇರಿ ಪೀಠೋಪಕರಣಗಳನ್ನು ಖರೀದಿಸಲು ಅನುದಾನವನ್ನು ಬಿಡುಗಡೆ ಮಾಡುವಂತೆ ಪ್ರಾಂಶುಪಾಲರು, ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜು, ಭುವನಹಳ್ಳಿ, ತುಮಕೂರು ಜಿಲ್ಲೆರವರು ಉಲ್ಲೇಖ(4)ರಲ್ಲಿ ಕೋರಿರುತ್ತಾರೆ.

ಅದರಂತೆ, ಅಲ್ಪಸಂಖ್ಯಾತರ ಮಾದರಿ ವಸತಿ ಶಾಲೆ(ನವೋದಯ), ಕೆ.ಆರ್‌ಪೇಟೆ, ಮಂಡ್ಯ ಜಿಲ್ಲೆಗೆ ಅಗತ್ಯ ಪ್ರಯೋಗಾಲಯ ಸಾಮಾಗ್ರಿಗಳನ್ನು ಖರೀದಿಸಲು ರೂ. **ರೂ.5,00,000/-(ರೂ. ಐದು ಲಕ್ಷಗಳು ಮಾತ್ರ)ಗಳು** ಹಾಗೂ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜು, ಭುವನಹಳ್ಳಿ, ತುಮಕೂರು ಜಿಲ್ಲೆಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳು & ಪೀಠೋಪಕರಣಗಳು ಖರೀದಿಸಲು **ರೂ.3,00,000/-(ರೂ. ಮೂರು ಲಕ್ಷಗಳು ಮಾತ್ರ)ಗಳು** ಅನುದಾನವನ್ನು ತುಮಕೂರು ಜಿಲ್ಲೆಯ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆರವರಿಗೆ ಅನುದಾನ ಬಿಡುಗಡೆ ಮಾಡಲು ನಿರ್ಧರಿಸಿದ್ದು ಅದರಂತೆ ಈ ಆದೇಶ.

ಮು.ಪ.ನೋ

**ಆದೇಶ**

**ಸಂಖ್ಯೆ:ಅಸಂನಿ/ವಶಾ/ಅನುದಾನ/ಮ&ತು/ಸಿಆರ್-04(059)/2021-22** **ದಿನಾಂಕ:24.09.2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನಾಧರಿಸಿ, ಅಲ್ಪಸಂಖ್ಯಾತರ ಮಾದರಿ ವಸತಿ ಶಾಲೆ(ನವೋದಯ), ಕೆ.ಆರ್‌ಪೇಟೆ, ಮಂಡ್ಯ ಜಿಲ್ಲೆಯಲ್ಲಿ 2021-22ನೇ ಶೈಕ್ಷಣಿಕ ಸಾಲಿನಿಂದ ಪ್ರಥಮ/ದ್ವಿತೀಯ ಪಿಯುಸಿ ತರಗತಿಗಳು ಪ್ರಾರಂಭವಾಗಿದ್ದು, ಸದರಿ ತರಗತಿಗಳಿಗೆ ಅಗತ್ಯವಿರುವ ಪ್ರಯೋಗಾಲಯ ಸಾಮಾಗ್ರಿಗಳನ್ನು ಖರೀದಿಸಲು ಒಟ್ಟು ರೂ.5,00,000/-(ರೂ. ಐದು ಲಕ್ಷಗಳು ಮಾತ್ರ)ಗಳು ಹಾಗೂ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಕಾಲೇಜು, ಭುವನಹಳ್ಳಿ, ತುಮಕೂರು ಜಿಲ್ಲೆಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳು & ಪೀಠೋಪಕರಣಗಳು ಖರೀದಿಸಲು ಒಟ್ಟು ರೂ.3,00,000/-(ರೂ. ಮೂರು ಲಕ್ಷಗಳು ಮಾತ್ರ)ಗಳು ಸೇರಿ **ಒಟ್ಟು ರೂ.8.00,000/-(ರೂ.ಎಂಟು ಲಕ್ಷಗಳು ಮಾತ್ರ)ಗಳನ್ನು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ** ರವರಿಗೆ ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ಅನುದಾನ ಬಿಡುಗಡೆ ಮಾಡಿದೆ.

**ನಿಬಂಧನೆಗಳು:-**

1) ಈ ಆದೇಶದಲ್ಲಿ ಬಿಡುಗಡೆ ಮಾಡಲಾದ ಅನುದಾನವನ್ನು **ಯಾವ ಉದ್ದೇಶಕ್ಕೆ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಮಾತ್ರ ಬಳಸಿಕೊಳ್ಳತಕ್ಕದ್ದು,** ಯಾವುದೇ ಕಾರಣಕ್ಕೂ ಅನುದಾನವನ್ನು ಮಾರ್ಗಪಲ್ಲಟ ಮಾಡುವಂತಿಲ್ಲ. ತಪ್ಪಿದ್ದಲ್ಲಿ ಮುಂದಿನ ಎಲ್ಲಾ ಆಗು ಹೋಗುಗಳಿಗೆ ತಮ್ಮನ್ನು ನೇರ ಹೊಣೆಗಾರನ್ನಾಗಿ ಮಾಡಲಾಗುವುದು.
2) ಖರೀದಿಸುವ ಎಲ್ಲಾ ಮೂಲಭೂತ ಸೌಕರ್ಯಗಳು, ಪೀಠೋಪಕರಣಗಳು ಹಾಗೂ ಪ್ರಯೋಗಾಲಯ ಸಾಮಾಗ್ರಿಗಳನ್ನು ದಾಸ್ತಾನು ವಹಿಯಲ್ಲಿ ಕಡ್ಡಾಯವಾಗಿ ನಮೂದಿಸಿ ನಿರ್ವಹಿಸುವುದು.
3) ಎಲ್ಲಾ ಖರ್ಚು ವೆಚ್ಚಗಳನ್ನು ಕೆ.ಟಿ.ಪಿ.ಪಿ ಕಾಯ್ದೆ ನಿಯಮಾನುಸಾರ ಭರಿಸುವುದು.
4) ಸದರಿ ಆದೇಶದಲ್ಲಿ ಬಿಡುಗಡೆ ಮಾಡಲಾದ ಅನುದಾನವನ್ನು ಮಾರ್ಚ್-2022ರ ಒಳಗಾಗಿ ವೆಚ್ಚ ಮಾಡತಕ್ಕದ್ದು.
5) ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನಕ್ಕೆ ಖರ್ಚು ಭರಿಸಿರುವ ಅನುದಾನದ ವಿವರ, (ಖಜಾನೆಯಿಂದ ಪಡೆದ 62ಬಿ ಪ್ರತಿಯೊಂದಿಗೆ) ನಿರ್ದೇಶನಾಲಯಕ್ಕೆ ಸಲ್ಲಿಸತಕ್ಕದ್ದು.

ಇದಕ್ಕೆ ತಗಲುವ ವೆಚ್ಚವನ್ನು ಲೆಕ್ಕಶೀರ್ಷಿಕೆ 2225-04-277-0-10 ಆಬ್ಜೆಕ್ಟ್ ಕೋಡ್ (059) ಅಲ್ಪಸಂಖ್ಯಾತರ ವಸತಿ ಶಾಲೆಗಳ ನಿರ್ವಹಣೆ ರಾಜ್ಯವಲಯ ಯೋಜನೆಯಡಿ 2021-22ನೇ ಸಾಲಿನಲ್ಲಿ ಒದಗಿಸಲಾದ ಆಯವ್ಯಯದಲ್ಲಿ ಭರಿಸತಕ್ಕದ್ದು.

24/9/21

**ನಿರ್ದೇಶಕರು,**
**ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,**
**ಬೆಂಗಳೂರು.**

ಪ್ರತಿಯನ್ನು:-

1. ಕರ್ನಾಟಕ ಮಹಾಲೇಖಪಾಲರು, ಬೆಂಗಳೂರು
2. ಸರ್ಕಾರದ ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ, ಬೆಂಗಳೂರು.
3. ಉಪ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವೆಚ್ಚ-3, ಬೆಂಗಳೂರು.
4. ಉಪ ನಿರ್ದೇಶಕರು, ಖಜಾನೆ ಗಣಕೀಕರಣ ಕೇಂದ್ರ, 2ನೇ ಮಹಡಿ, ಖನಿಜ ಭವನ, ಬೆಂಗಳೂರು.
5. ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಅಗತ್ಯಕ್ರಮಕ್ಕಾಗಿ.
6. ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಖಜಾನಾಧಿಕಾರಿಗಳು.
7. ಲೆಕ್ಕಪತ್ರ ಶಾಖೆ/ಕಛೇರಿ ಪ್ರತಿ.